# 2014-15 ನೇ ಸಾಲಿಗೆ ಆಯ್ಕೆಯಾದ ಹಾವೇರಿ ಜಿಲ್ಲೆಯ ಯುವ ಕೃಷಿಕ

## ಆವಿಷ್ಕಾರ ಮಾಡಿದ ಯುವ ಕೃಷಿಕ

**ಶ್ರೀ ಶಿದ್ದಲಿಂಗೇಶ್ವರ ವೀರಪ್ಪ ಕಲಿವಾಳ**
ಗ್ರಾಮ: ಇಬ್ರಾಹಿಂಪೂರ
ತಾ: ಶಿಗ್ಗಾಂವ್ ಜಿ: ಹಾವೇರಿ
ಮೊ: 9743759403

ಕೃಷಿಯನ್ನು ಲಾಭದಾಯಕವನ್ನಾಗಿ ಮಾಡಿಕೊಂಡು ಇತರರಿಗೆ ಮಾದರಿಯಾದ ರೈತರು ಬೆರಳೆಣಿಕೆಯಷ್ಟು ಮಾತ್ರ. ಇಂತಹ ಮಾದರಿ ರೈತರಲ್ಲಿ ಒಬ್ಬರಾದ ಶಿಗ್ಗಾಂವ್ ತಾಲ್ಲೂಕಿನ ಇಬ್ರಾಹಿಂಪುರ ಗ್ರಾಮದವರಾದ ಶ್ರೀ ಶಿದ್ದಲಿಂಗೇಶ್ವರ ವೀರಪ್ಪ ಕಲಿವಾಳ ತಮ್ಮ 25 ಎಕರೆ ಜಮೀನಿನಲ್ಲಿ ಬೆಳೆಗಳಾದ ಹತ್ತಿ, ಮಾವು, ಹಲಸು, ತೆಂಗು, ಲಿಂಬು ಬೆಳೆಯನ್ನು ಹಾಗೂ ಅಡಿಕೆ ತೋಟದಲ್ಲಿ ಬಾಳೆ ದಾಲ್ಚಿನ್ನಿ, ಜಾಜಿಕಾಯಿ ಅರಿಷಿಣ ಪಪ್ಪಾಯಿ ಬೆಳೆಗಳನ್ನು ಹೊಂದಿದ್ದು ಕೃಷಿ ಜೊತೆಗೆ ಬದುಗಳಲ್ಲಿ ಅರಣ್ಯ ಗಿಡಗಳಾದ ತೇಗ, ಹೊಂಗೆ ಮುಂತಾದವು. ಕೃಷಿ ಜೊತೆಗೆ ಜೇನು ಸಾಕಾಣಿಕೆ, ಸಾವಯವ ಕೃಷಿಗೆ ಹೆಚ್ಚಿನ ಒತ್ತು ನೀಡುವ ಇವರು ಎರೆಹುಳು ಗೊಬ್ಬರ ಹಾಗೂ ಹೈನುಗಾರಿಕೆ ಮತ್ತು ಕುರಿ ಸಾಕಾಣಿಕೆ ಸಹ ಮಾಡುತ್ತಿದ್ದಾರೆ. ನೀರಾವರಿ ವ್ಯವಸ್ಥೆ ಜೊತೆಗೆ, ವ್ಯವಸಾಯ ಮಾಡಿಕೊಂಡು ಬೆಳೆಗಳಿಗೆ ಸಿಗುವ ಹಾಗೆ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಕೃಷಿಗೆ ಬೇಕಾದ ಯಂತ್ರೋಪಕರಣಗಳನ್ನು ಸಹ ಹೊಂದಿದ್ದಾರೆ. ಅವು ಟ್ರ್ಯಾಕ್ಟರ್ ಸಿಂಪರಣೆಗಳು ಮೇವು ಕತ್ತರಿಸುವ ಯಂತ್ರ ಧಾನ್ಯ ಸಂಸ್ಕರಣಾ ಉಪಕರಣಗಳು ಕಬ್ಬಿಣದ ಕೂರಿಗೆ, ಕಟ್ಟಿಗೆ ಕೂರಿಗೆ ಅಳವಡಿಸುತ್ತಾ ಕೃಷಿಯಲ್ಲಿ ಬಂದಿದ್ದಾರೆ. ಒಂದು ವರ್ಷಕ್ಕೆ ಸುಮಾರು 15 ರಿಂದ 18 ಲಕ್ಷದವರೆಗೂ ಆದಾಯ ಹೊಂದಿದ್ದಾರೆ.